# 'ಶ್ರೀರಾಮಕೃಷ್ಣ ವಚನವೇದ'
# ಭಾವಧಾರೆ - 3

ಸ್ವಾಮಿ ನಿತ್ಯಸ್ಥಾನಂದ

## ೧. ಗುರು-ಶಿಷ್ಯ

**'ವ**ಚನವೇದ'ವು ಮಾಸ್ಟರ್ ಮಹಾಶಯರು ಶ್ರೀರಾಮಕೃಷ್ಣರನ್ನು ಸಂಧಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಈ ಭೇಟಿಯಿಂದ ಮಾಸ್ಟರ್ ಮಹಾಶಯರ ಜೀವನದಲ್ಲಿಯೂ ಸಮಾಜದ ಆಧ್ಯಾತ್ಮಿಕ ಪುನರುತ್ಥಾನದಲ್ಲಿಯೂ ಒಂದು ಹೊಸ ಅಧ್ಯಾಯವೇ ಪ್ರಾರಂಭವಾದಂತಾಗುತ್ತದೆ. ಮಾಸ್ಟರ್ ಮಹಾಶಯರು ಸಂಸಾರ ತಾಪತ್ರಯದಿಂದ ಬೇಸತ್ತು ಆತ್ಮಹತ್ಯೆಯ ಚಿಂತನೆಯಲ್ಲಿ ತೊಡಗಿದ್ದರು. ಇಂತಹ ವಿಷಾದದ ಮನಸ್ಥಿತಿಯಲ್ಲಿ ಅವರು ಶ್ರೀರಾಮಕೃಷ್ಣರನ್ನು ಸಂಧಿಸಿದುದು. ಇದು ಭಗವದ್ಗೀತೆಯ ಪ್ರಾರಂಭಾಧ್ಯಾಯವನ್ನು ಮನಸ್ಸಿಗೆ ತರುತ್ತದೆ. ಅರ್ಜುನನ ವಿಷಾದದೊಂದಿಗೆ ಗೀತೋಪದೇಶವು ಪ್ರಾರಂಭವಾಗುವುದು. ವಿಷಾದವೂ ಒಂದು ಸುಯೋಗವಾಗಬಲ್ಲದು. ದುಃಖವು ನಮ್ಮ ಜೀವನದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ದುಃಖವಿಲ್ಲದೆ ಬರಿಯ ಸುಖವಿದ್ದರೆ ಯಾವ ಕ್ಷೇತ್ರದಲ್ಲಿಯೂ ಪ್ರಗತಿಯುಂಟಾಗುತ್ತಿರಲಿಲ್ಲ. ಸ್ವರ್ಗದಲ್ಲಿ ಬರಿ ಸುಖ, ನರಕದಲ್ಲಿ ಬರಿ ಕಷ್ಟ. ಇವೆರಡರಲ್ಲಿಯೂ ಪ್ರಗತಿಯಿಲ್ಲ. ಸುಖ-ದುಃಖಗಳೆರಡೂ ಇರುವ ಮನುಷ್ಯಲೋಕದಲ್ಲಿ ಮಾತ್ರ ಪ್ರಗತಿ, ಇಲ್ಲಿ ಮಾತ್ರ ಸಾಧನೆ ಮಾಡಿ ಮುಕ್ತಿಯನ್ನು ಪಡೆಯಲು ಸಾಧ್ಯ.

ಮಾಸ್ಟರ್ ಮಹಾಶಯರಿಗೆ ಪರಮಹಂಸರ ಪ್ರಥಮ ದರ್ಶನ ದೊರೆತುದು ವಸಂತ ಋತುವಿನ ಒಂದು ಭಾನುವಾರ- ಫೆಬ್ರವರಿ ೧೮೮೨. ವಸಂತಋತುವಿನಲ್ಲಿಯೂ ಒಂದು ವೈಶಿಷ್ಟ್ಯವಿದೆ. ಇದು ಹೊಸತನ್ನು, ಹೊಸ ಆಶಾಚಿಗುರನ್ನು ನವೋತ್ಸಾಹವನ್ನು, ಹೊಸ ತಿರುವನ್ನು ಸೂಚಿಸುತ್ತದೆ. ಮಾಸ್ಟರ್ ಮಹಾಶಯರ ಜೀವನದಲ್ಲಿಯೂ ಒಂದು ಹೊಸ ತಿರುವು, ಒಂದು ಮಹಾಪರಿವರ್ತನೆಯ ಘಟ್ಟ. ಅವರ ಪಾಲಿಗೆ ಶ್ರೀರಾಮಕೃಷ್ಣರು ವಸಂತ ಋತುವಿನಂತೆ ಸಿಕ್ಕಿದರು. '**ಶಾಂತಾ ಮಹಾಂತೋ ನಿವಸಂತಿ ಸಂತಃ ವಸಂತವಲ್ಲೋಕಹಿತಂ ಚರಂತಃ ।**' (ಶಾಂತರೂ ಮಹಾತ್ಮರೂ ಆದ ಸಂತರು ವಸಂತದಂತೆ ಲೋಕಹಿತವನ್ನು ಉಂಟುಮಾಡುತ್ತ ಇರುತ್ತಾರೆ) ಎಂಬ 'ವಿವೇಕಚೂಡಾಮಣಿ'ಯ ಮಾತು ಮನಸ್ಸಿಗೆ ಬರುತ್ತದೆ.

ಮಾಸ್ಟರ್ ಮಹಾಶಯರು ಸ್ನೇಹಿತ ಸಿಧುವಿನೊಡನೆ ಸಂಜೆ ವರಾಹನಗರದ ಬೇರೆ ಬೇರೆ ಉದ್ಯಾನವನಗಳಲ್ಲಿ ಸುತ್ತಾಡುತ್ತ, ದಕ್ಷಿಣೇಶ್ವರ ದೇವಾಲಯದಲ್ಲಿ ಪರಮಹಂಸರೊಬ್ಬರು ವಾಸಿಸುತ್ತಿದ್ದಾರೆಂದು ತಿಳಿದು ಅಲ್ಲಿಗೆ ಬಂದರು. ಮಹಾದ್ವಾರವನ್ನು ಪ್ರವೇಶಿಸುತ್ತಿದ್ದಂತೆಯೇ ಮುಂಗತ್ತಲಾಗುತ್ತಿತ್ತು. ಅವರು ನೇರವಾಗಿ ಪರಮಹಂಸರ ಕೊಠಡಿಗೆ ಹೋಗಿ ನೋಡಿದಾಗ, ''ಪರಮಹಂಸರು ಪೂರ್ವಾಭಿಮುಖವಾಗಿ ಒಂದು ಮಂಚದ ಮೇಲೆ ಕುಳಿತು ಪ್ರಸನ್ನಚಿತ್ತದಿಂದ ಭಗವದ್ವಿಷಯವಾಗಿ ಮಾತನಾಡುತ್ತಿದ್ದರು. ಕೊಠಡಿ ಜನರಿಂದ ಕಿಕ್ಕಿರಿದು ತುಂಬಿತ್ತು. ಎಲ್ಲರೂ ನೆಲದ ಮೇಲೆ ಕುಳಿತು ಅವರ ಅಮೃತವಾಣಿಯನ್ನು ಸ್ತಬ್ಧರಾಗಿ ಕೇಳುತ್ತಿದ್ದರು.'' ಮಾಸ್ಟರ್ ಮಹಾಶಯರಿಗೆ ಅನಿಸಿತಂತೆ, ''ಸಾಕ್ಷಾತ್ ಶುಕದೇವನೇ ಭಗವದ್ವಿಷಯವಾಗಿ ಅಲ್ಲಿ ಮಾತನಾಡುತ್ತಿರುವ ಹಾಗೆ.'' ಪರಮಹಂಸರನ್ನು ಶುಕಮುನಿಗೆ ಹೋಲಿಸಿರುವುದು ತುಂಬ ಅರ್ಥಪೂರ್ಣವಾಗಿದೆ. ಶುಕಮುನಿಯು ಬೋಧಿಸಿದ ಭಾಗವತವು ಎಂತಹುದು ಎಂಬುದನ್ನು ಭಾಗವತವೇ ಸ್ವಾರಸ್ಯಕರವಾಗಿ ವರ್ಣಿಸುತ್ತದೆ:

**ನಿಗಮಕಲ್ಪತರೋರ್ಗಲಿತಂ ಫಲಂ**
**ಶುಕಮುಖಾದಮೃತ ದ್ರವಸಂಯುತಮ್।**
**ಪಿಬತ ಭಾಗವತಂ ರಸಮಾಲಯಂ**
**ಮುಹುರಹೋ ರಸಿಕಾಃ ಭುವಿ ಭಾವುಕಾಃ ॥**

*(ಭಾಗವತ, ೧.೧.೩)*

''ರಸಿಕರೂ ಭಾವುಕರೂ ಆದ ನೀವು ಭಕ್ತಿಯ ರಸಸಾಗರವೇ ಆಗಿರುವ ಭಾಗವತವನ್ನು ಮತ್ತೆ ಮತ್ತೆ ಕುಡಿಯಿರಿ. ಇದು ವೇದವೆಂಬ ಕಲ್ಪತರುವಿನ ಅಮೃತರಸದಿಂದ ಕೂಡಿದ ಮಾಗಿದ ಫಲ. ಇದು ಶುಕನ ಬಾಯಿಂದ ಬಂದಿರುವುದು.'' ಇಲ್ಲಿ ಶುಕ ಎಂದರೆ ಗಿಳಿಯೂ ಆಗಬಹುದು. ಆ ಗಿಳಿಯು ಆ ಹಣ್ಣನ್ನು ತಿನ್ನುತ್ತಿರುವಾಗ ಮರದಿಂದ ಬಿದ್ದಿರುವುದು (ಗಲಿತಂ). ಹಾಗಾಗಿ ಅದು ಶುಕಮುಖದಿಂದ ಬಂದಿರುವುದು. ಇಲ್ಲಿ ಶ್ರೀರಾಮಕೃಷ್ಣರು ಭಾಗವತವನ್ನು ಜಿಲೇಬಿಗೆ ಹೋಲಿಸಿರುವುದನ್ನು ನೆನಪಿಸಿಕೊಳ್ಳಬಹುದು. ಈ ಜಿಲೇಬಿಯು ಜ್ಞಾನಾಗ್ನಿಯಲ್ಲಿ ಬೇಯಿಸಲ್ಪಟ್ಟು, ಮತ್ತು ಭಕ್ತಿಯ ರಸಪಾಕದಲ್ಲಿ ಅದ್ದಲ್ಪಟ್ಟಿರುವ ಮಧುರವಾದ ಸಿಹಿತಿಂಡಿ. ಇದೇ ಮಾತು 'ವಚನವೇದ'ಕ್ಕೂ ಅನ್ವಯಿಸುತ್ತದೆ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಮಾಸ್ಟರ್ ಮಹಾಶಯರು ಹೇಳುವ ಇನ್ನೊಂದು ಮಾತು ಬಹಳ ಅರ್ಥಪೂರ್ಣವಾದುದು: ''ಸರ್ವತೀರ್ಥಗಳೂ ಅಲ್ಲಿ ಸಮಾಗಮವಾಗಿರುವ ಹಾಗೆ.'' ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿ ಭಕ್ತರೊಡನೆ ಮಾತನಾಡುತ್ತಿರುವ ಸಂದರ್ಭ ವನ್ನು ವಿವರಿಸುವ ರೀತಿ ಇದು! 'ಮ' ಅವರಿಗೆ ದಕ್ಷಿಣೇಶ್ವರವೆಂಬ ತೀರ್ಥದಲ್ಲಿ ಶ್ರೀರಾಮಕೃಷ್ಣರ ವಾಕ್‌ತೀರ್ಥದಲ್ಲಿ ಮಿಂದಂತಾ ಯಿತು! ಶ್ರೀರಾಮಕೃಷ್ಣರೇ ತೀರ್ಥಸ್ವರೂಪರು. **ತೀರ್ಯತೇ ಅನೇನ ಇತಿ ತೀರ್ಥಂ - ಸಂಸಾರ ಸಾಗರ ತರಣೋಪಾಯ ಭೂತಂ** — ''ತೀರ್ಥವೆಂದರೆ ಪಾರುಗಾಣಿಸುವುದು - ಸಂಸಾರ ಸಾಗರವನ್ನು ದಾಟುವ ಸಾಧನವಾಗಿರುವುದು.'' ಶ್ರೀರಾಮ ಕೃಷ್ಣರು ಅಂತಹ ಸಾಧನವಾಗಿರುವುದರಿಂದ ಅವರು ತೀರ್ಥ ಸ್ವರೂಪರು. ಅಷ್ಟೇ ಅಲ್ಲ, ತಮ್ಮ ಪವಿತ್ರತೆಯಿಂದ ತೀರ್ಥವನ್ನು ಮತ್ತಷ್ಟು ಪವಿತ್ರಗೊಳಿಸುತ್ತಾರೆ. (ತೀರ್ಥೀಕುರ್ವಂತಿ ತೀರ್ಥಾಣಿ) ಮೂರು ಬಗೆಯ ತೀರ್ಥಗಳನ್ನು ನಾವು ಗುರುತಿಸಬಹುದು: ೧) ವಿವಿಧ ತೀರ್ಥಕ್ಷೇತ್ರಗಳು, ಪವಿತ್ರನದಿ, ಕೊಳ ಮುಂತಾದವು ಗಳು; ೨) ಸಾಧುಸಂಗ ೩); ಜ್ಞಾನ, ಕ್ಷಮೆ, ದಯೆ, ಸತ್ಯ — ಇವೇ ಮುಂತಾದ ನೈತಿಕ ಮತ್ತು ಆಧ್ಯಾತ್ಮಿಕ ಗುಣಗಳು. ಮಹಾ ಭಾರತದಲ್ಲಿ ಬರುವ ಒಂದು ಶ್ಲೋಕ ಈ ಸಂದರ್ಭಕ್ಕೆ ಹೋಲಿಕೆ ಯಾಗುತ್ತದೆ:

**ಆತ್ಮಾ ನದೀ ಸಂಯಮತೋಯಪೂರ್ಣಾ**
**ಸತ್ಯಾವಹಾಶೀಲತಟಾ ದಯೋವೀತ ।**
**ತತ್ರಾವಗಾಹಂ ಕುರು ಪಾಂಡುಪುತ್ರ**
**ನ ವಾರಿಣಾ ಶುದ್ಧ್ಯತಿ ಚಾಂತರಾತ್ಮಾ ॥**

''ನಮ್ಮ ವ್ಯಕ್ತಿತ್ವವೇ ಒಂದು ನದಿ, ಸಂಯಮವೇ ಅದರ ನೀರು, ಅದರ ಹರಿಯುವಿಕೆ ಸತ್ಯ, ಶೀಲವೇ ಅದರ ದಡಗಳು ಹಾಗೂ ದಯೆಯೇ ಅಲೆಗಳು. ಹೇ ಪಾಂಡುಪುತ್ರ, ಅಂತಹ ನದಿಯಲ್ಲಿ ಮೀಯಬೇಕು, ಅಂತರಂಗವು ನೀರಿನಿಂದ ಶುದ್ಧ ವಾಗುವುದಿಲ್ಲವಪ್ಪಾ!''

### ಕರ್ಮ ಎಲ್ಲಿಯವರೆಗೆ?

ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ: ''ಯಾವಾಗ ನಿಮಗೆ ಹರಿನಾಮವನ್ನೋ ರಾಮನಾಮವನ್ನೋ ಒಮ್ಮೆ ಉಚ್ಚರಿಸಿದ ಮಾತ್ರದಿಂದಲೇ ರೋಮಾಂಚನವಾಗುವುದೋ, ಪ್ರೇಮಾಶ್ರು ಸುರಿಯುವುದೋ, ಆಗ ನಿಜವಾಗಿ ತಿಳಿದುಕೊಳ್ಳಿ, ಇನ್ನು ನೀವು ಸಂಧ್ಯಾದಿ ಕರ್ಮಗಳನ್ನು ಮಾಡಬೇಕಾಗಿಲ್ಲ ಎಂದು. ಆಗ ಮಾತ್ರವೇ ನಿಮಗೆ ಕರ್ಮತ್ಯಾಗದ ಅಧಿಕಾರ — ಕರ್ಮ ತನಗೆ ತಾನೇ ನಿಮ್ಮನ್ನು ಬಿಟ್ಟುಹೋಗುತ್ತದೆ.''

ಇಲ್ಲಿ ಶ್ರೀರಾಮಕೃಷ್ಣರು ಹೇಳುವುದು ಪ್ರೇಮಾಶ್ರು, ದುಃಖಾಶ್ರುವಲ್ಲ, ಸುರಿಯಬೇಕು ಎಂಬುದಾಗಿ. ಯಥಾರ್ಥ ಭಕ್ತಿಭಾವದಿಂದ ಸುರಿಯುವ ಕಣ್ಣೀರು. ಕೆಲವು ಭಾವುಕ ವ್ಯಕ್ತಿ ಗಳಿಗೂ ಭಗವದ್‌ಸಂಕೀರ್ತನೆಯನ್ನು ಕೇಳುವಾಗ ತುಂಬ ಕಣ್ಣೀರು ಸುರಿಯುವುದುಂಟು (sentimental). ಆದರೆ ಆ ಭಕ್ತಿಭಾವ ತಾತ್ಕಾಲಿಕ, ಅನಂತರ ಅವರು ಸಾಮಾನ್ಯ ಪ್ರಾಪಂ ಚಿಕರಂತೆಯೇ ವರ್ತಿಸುತ್ತಾರೆ. ಇಂಥವರ ಕರ್ಮ ಬಿದ್ದುಹೋಗು ವುದಿಲ್ಲ, ಅವರು ಬಲಾತ್ಕಾರದಿಂದ ಬಿಟ್ಟರೆ ಅವರಿಗೂ ಹಾನಿ, ಕುಟುಂಬಕ್ಕೂ ಸಮಾಜಕ್ಕೂ ಹಾನಿ. ಯಾರಿಗೆ ನಿಜವಾಗಿಯೂ ಮಾಡಬೇಕಾದ ಕರ್ತವ್ಯಗಳಿಲ್ಲ ಎಂಬುದನ್ನು ಶ್ರೀಕೃಷ್ಣನು ಭಗವ ದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ:

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥**

*(೯.೨೨)*

''ಯಾವ ಭಕ್ತರು ಬೇರೆ ಎಲ್ಲ ಚಿಂತನೆಯನ್ನೂ ಬಿಟ್ಟು ನನ್ನನ್ನೇ ಚಿಂತಿಸುತ್ತ ನನ್ನನ್ನು ಉಪಾಸಿಸುತ್ತಾರೋ ನಿತ್ಯವೂ ನನ್ನೊಡನೆಯೇ ಇರುವ ಅವರ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತೇನೆ.'' ಅಂದರೆ ಅವರ ಕರ್ತವ್ಯಗಳೆಲ್ಲವೂ ಬಿದ್ದು ಹೋಗುತ್ತವೆ ಎಂದರ್ಥ. ಇದು ಭಕ್ತರ ದೃಷ್ಟಿಯಿಂದ, ಜ್ಞಾನಿಯ ದೃಷ್ಟಿಯಿಂದ ಹೇಗೆ ಎಂಬುದನ್ನು ಶ್ರೀಕೃಷ್ಣ ಹೇಳುತ್ತಾನೆ:

**ಯಸ್ತ್ವಾತ್ಮರತಿರೇವ ಸ್ಯಾತ್ ಆತ್ಮತೃಪ್ತಶ್ಚ ಮಾನವಃ ।**
**ಆತ್ಮನ್ಯೇವ ಚ ಸಂತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ ॥**

*(೩.೧೭)*

''ಯಾರು ಆತ್ಮನಲ್ಲಿಯೇ ರಮಿಸುತ್ತಾನೆಯೋ, ಆತ್ಮತೃಪ್ತ ನಾಗಿರುತ್ತಾನೋ ಆತ್ಮನಲ್ಲಿಯೇ ಸಂತೋಷವನ್ನು ಅನುಭವಿಸು ತ್ತಾನೋ, ಯಾವನ ಸುಖಕ್ಕೆ ಬಾಹ್ಯ ವಿಷಯಗಳ ಆವಶ್ಯಕತೆಯೇ ಇಲ್ಲವೋ ಅಂತಹ ವ್ಯಕ್ತಿಗೆ ಯಾವ ಕರ್ತವ್ಯವೂ ಇರುವುದಿಲ್ಲ.'' ಇಲ್ಲಿ ಶ್ರೀರಾಮಕೃಷ್ಣರು ಶ್ರೀಕೃಷ್ಣನ ಅಭಿಪ್ರಾಯವನ್ನೇ ಅನು ಸರಿಸಿ ಕರ್ಮದ ಬಗ್ಗೆ ತಮ್ಮ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ನಮ್ಮ ಸಂಪ್ರದಾಯದ ಪ್ರಕಾರ ಕರ್ಮದಲ್ಲಿ ಮೂರು ವಿಧ:

**೧) ನಿತ್ಯಕರ್ಮ (obligatary duties):** ತನ್ನ ಕುಟುಂಬ, ಸಮಾಜ, ತಾನಿರುವ ಪರಿಸರ ಮುಂತಾದವುಗಳ ವಿಷಯದಲ್ಲಿ ಮಾಡಲೇಬೇಕಾದ ಜವಾಬ್ದಾರಿಯ ಕರ್ತವ್ಯಗಳು. ಆಯಾಯ ಸನ್ನಿವೇಶಗಳಿಗೆ ಅನುಸಾರವಾಗಿ ಇವುಗಳನ್ನು ವ್ಯಕ್ತಿಯು ನಿರ್ವ ಹಿಸಲೇ ಬೇಕಾಗುತ್ತದೆ. ಭಗವದ್ಗೀತೆಯಲ್ಲಿ *(೧೮.೫)* ಶ್ರೀಕೃಷ್ಣನು ಹೇಳುತ್ತಾನೆ: **ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯ ಮೇವ ತತ್।** ''ಯಜ್ಞವೆಂದರೆ ಪರಿಸರದ ವಿಷಯದಲ್ಲಿ ನಮ್ಮ ಕರ್ತವ್ಯ (service to environment), ದಾನವೆಂದರೆ ಮಾನವ ಸೇವೆ (service to humanity) ಮತ್ತು ತಪಸ್ಸು ಎಂದರೆ ತನ್ನ ಆಧ್ಯಾತ್ಮಿಕ ಉನ್ನತಿ (service to ourselves). ಈ ಕರ್ಮಗಳನ್ನು ಮಾಡಲೇಬೇಕು, ಬಿಡಬಾರದು.'' ಮೇಲೆ

ಹೇಳಿದ ಭಕ್ತಿ ಮತ್ತು ಜ್ಞಾನ ಇದಕ್ಕೆ ಅಪವಾದ.

**೨) ಕಾಮ್ಯಕರ್ಮ:** ನಮ್ಮ ಆಸೆಗಳ ಪೂರ್ತಿಗಾಗಿ ಮಾಡುವ ಕರ್ಮ. ಹಿಂದೆ ಇದಕ್ಕಾಗಿ ಅಗ್ನಿಹೋತ್ರದ ಕರ್ಮಗಳನ್ನೂ ಯಾಗ-ಯಜ್ಞಗಳನ್ನೂ ಮಾಡುತ್ತಿದ್ದರು. ಹಣಕ್ಕಾಗಿ ಮಾಡುವ ವ್ಯಾಪಾರಾದಿ ಕರ್ಮಗಳು, ಅಧಿಕಾರ, ಸ್ಥಾನಮಾನ, ಕೀರ್ತಿ ಮುಂತಾದವುಗಳನ್ನು ಉದ್ದೇಶವಾಗಿಟ್ಟುಕೊಂಡು ಮಾಡುವ ಕರ್ಮಗಳು, ಅವು ಸೇವಾಕಾರ್ಯಗಳಾದರೂ, ಕಾಮ್ಯಕರ್ಮಗಳೇ. ಇಂತಹ ಕರ್ಮಗಳನ್ನು ಧರ್ಮಸಮ್ಮತವಾಗಿ, ನೈತಿಕ ನಿಯಮಗಳನ್ನು ಮೀರದೆ ಮಾಡಿದರೆ ಕ್ರಮೇಣ ಅವು ನಮ್ಮನ್ನು ಭಗವನ್ಮುಖಗೊಳಿಸುತ್ತವೆ. ಆಗ ಅವು ನಿಷ್ಕಾಮಕರ್ಮಗಳಾಗಿ ಪರಿವರ್ತಿತಗೊಳ್ಳುತ್ತವೆ. ಮುಂದೆ ಮನಸ್ಸು ಹೆಚ್ಚು ಭಗವನ್ಮುಖವಾದಷ್ಟೂ ಕರ್ಮಗಳು, ನಿತ್ಯಕರ್ಮಗಳು, ಬಿದ್ದು ಹೋಗುತ್ತವೆ.

**೩) ನಿಷಿದ್ಧಕರ್ಮ:** ಮಾಡಬಾರದ ಕೆಲಸಗಳು. ಇವುಗಳ ಬಗ್ಗೆ ಹೆಚ್ಚು ಹೇಳಬೇಕಾಗಿಯೇ ಇಲ್ಲ. ಎಲ್ಲರಿಗೂ ಗೊತ್ತಿರುವ ವಿಷಯವೇ. ಸಾಧಕರ ದೃಷ್ಟಿಯಿಂದ ಇನ್ನು ಕೆಲವು ನಿಷಿದ್ಧ ಕರ್ಮಗಳನ್ನು ಗುರುತಿಸಬಹುದು. ಉದಾಹರಣೆಗೆ, ತನ್ನನ್ನು ತಾನು ದ್ವೇಷಿಸುವುದು, ತನ್ನ ಬಗ್ಗೆ ಕೀಳರಿಮೆ ಹೊಂದಿರುವುದು, ನಿರಾಶಾವಾದ ಇವೇ ಮುಂತಾದವುಗಳು.

ಭಗವದ್ಭಾವದಲ್ಲಿ ಅಥವಾ ಆತ್ಮಭಾವದಲ್ಲಿ ಮನಸ್ಸು ತಲ್ಲೀನವಾದಾಗ ಕರ್ಮ ತಾನಾಗಿಯೇ ಬಿದ್ದುಹೋಗುತ್ತದೆ, ನಾವಾಗಿಯೇ ಬಲಾತ್ಕಾರವಾಗಿ ಬಿಡಬಾರದು ಎಂಬುದನ್ನು ಶ್ರೀರಾಮಕೃಷ್ಣರು ಒತ್ತಿ ಹೇಳುತ್ತಿದ್ದಾರೆ. ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವುದೆಂದರೆ ಕ್ರಮೇಣ ಕರ್ಮಗಳು ನಿಂತು ಹೋಗುವುದು (gradual cessation of all activities). ಇದನ್ನೇ ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಸಂಧ್ಯೆ ಗಾಯತ್ರಿಯಲ್ಲಿ ಲಯಹೊಂದುತ್ತದೆ, ಗಾಯತ್ರಿ ಓಂಕಾರದಲ್ಲಿ ಲಯಹೊಂದುತ್ತದೆ.'' ಸಂಧ್ಯೆ ಎಂದರೆ ಎಲ್ಲ ಕ್ರಿಯಾವಿಧಿಗಳಿಗೂ ಅನ್ವಯಿಸುತ್ತದೆ. ಸಾಧಕನು ಮುಂದುವರಿದಂತೆ ಕೇವಲ ಗಾಯತ್ರಿ ಯನ್ನು ಉಚ್ಚರಿಸಿದರೆ ಸಾಕಾಗುತ್ತದೆ. ಮುಂದೆ ಭಗವದ್ ಭಾವ ದಲ್ಲಿ ಎಷ್ಟು ತಲ್ಲೀನನಾಗುತ್ತಾನೆಂದರೆ ಗಾಯತ್ರಿಯನ್ನೂ ಉಚ್ಚ ರಿಸಲಾಗದೆ ಕೇವಲ ಓಂಕಾರವನ್ನು ಜಪಿಸುತ್ತಾನೆ. ಕೊನೆಗೆ ಅದೂ ನಿಂತು ಹೋಗಿ ಪರಬ್ರಹ್ಮದಲ್ಲಿ ಒಂದಾಗುತ್ತಾನೆ — ಸಮಾಧಿಸ್ಥಿತಿ ಯಲ್ಲಿ. ''ರೋಮಾಂಚನವಾಗಬೇಕು, ಪ್ರೇಮಾಶ್ರು ಸುರಿಯ ಬೇಕು'' ಎಂಬ ಮಾತನ್ನು ಶ್ರೀರಾಮಕೃಷ್ಣರು ಹೇಳುತ್ತಾರೆ. ಇದು ಭಕ್ತಿಯ ಒಂದು ಸ್ಥಿತಿ. ಭಕ್ತಿಯೋಗದಲ್ಲಿ ಗೌಣೀ(ವೈಧೀ), ಮುಖ್ಯಾ ಮತ್ತು ಪರಾ ಎಂಬ ಮೂರು ಹಂತಗಳಿವೆ. ಗೌಣೀ ಭಕ್ತಿಯ ಸ್ಥಿತಿಯಲ್ಲಿ ಸಾಧಕನು ಎಲ್ಲ ವಿಧಿನಿಯಮಗಳಿಗೆ ಅನುಸಾರವಾಗಿ ಸಾಧನೆ ಮಾಡುತ್ತಾನೆ. ಅವನಲ್ಲಿ ಪ್ರಾಪಂಚಿಕ ಸೆಳೆತವೂ ಇರುತ್ತದೆ, ಮತ್ತು ಭಗವದಾಕರ್ಷಣೆಯೂ ಇರುತ್ತದೆ. ಈ ಹಂತದಲ್ಲಿ ತುಂಬ ಹೋರಾಟವಿರುತ್ತದೆ. ಇದು ಅನೇಕಾಂತಿಕ ಭಕ್ತಿ — ಬೇರೆ ಬೇರೆ ಪ್ರಾಪಂಚಿಕ ವಿಷಯಗಳ ಕಡೆಗೂ ಮನಸ್ಸು ಹೋಗುತ್ತಿರುತ್ತದೆ. ಈ ಹೋರಾಟದಲ್ಲಿ ಸಾಧಕನು ಮುಂದುವರಿದರೆ ಅವನು ಮುಖ್ಯಾಭಕ್ತಿಯ ಹಂತವನ್ನು ತಲುಪುತ್ತಾನೆ. ಇಲ್ಲಿ ಭಕ್ತಿ ಏಕಾಂತಿಕವಾಗುತ್ತದೆ. **'ಭಕ್ತಾ ಏಕಾಂತಿನೋ ಮುಖ್ಯಾಃ'** ಎಂದು ನಾರದರು ಹೇಳುತ್ತಾರೆ: *ಕಂಠಾವರೋಧ ರೋಮಾಂಚಾಶ್ರುಭಿಃ ಪರಸ್ಪರಂ ಲಪಮಾನಾಃ ಪಾವಯಂತಿ ಕುಲಾನಿ ಪೃಥಿವೀಂ ಚ* — ''ಕಂಠಾವರೋಧನದಿಂದಲೂ ರೋಮಾಂಚನದಿಂದಲೂ ಅಶ್ರುಧಾರೆಯಿಂದಲೂ ಭಕ್ತರು ಪರಸ್ಪರ ಮಾತನಾಡುತ್ತಾ ಅವರು ಕುಲವನ್ನೂ ಪೃಥ್ವಿಯನ್ನೂ ಪಾವನಗೊಳಿಸುತ್ತಾರೆ.'' (ನಾರದ ಭಕ್ತಿಸೂತ್ರ). ಮುಂದಿನ ಹಂತ ಪರಾಭಕ್ತಿ. ಇದು ಭಗವದ್‌ಪ್ರಾಪ್ತಿಯಿಂದ ಉಂಟಾಗುವಂತಹದು. ಇದು ಭಕ್ತಿಯ ಅತ್ಯಂತ ಶ್ರೇಷ್ಠವಾದ ಸ್ಥಿತಿ ಎಂದು ಹೇಳಲಾಗಿದೆ. ಮುಖ್ಯಾಭಕ್ತಿಯ ಹಂತದಲ್ಲಿಯೇ ಕರ್ಮಗಳು ಬಿದ್ದುಹೋಗಲು ಪ್ರಾರಂಭಿಸುತ್ತವೆ ಎಂಬುದು ಶ್ರೀರಾಮಕೃಷ್ಣರ ಮಾತಿನಿಂದ ತಿಳಿದುಬರುತ್ತದೆ. ಪ್ರಾರಂಭಾವಸ್ಥೆಯಲ್ಲಿ ಕರ್ಮ ಮತ್ತು ಧ್ಯಾನ ಸಮಾನಾಂತರವಾಗಿ ಮುಂದುವರಿಯಬೇಕು. ಮುಂದೆ ಮನಸ್ಸು ಹೆಚ್ಚು ಭಗವನ್ಮುಖವಾದಷ್ಟೂ ಕರ್ಮಗಳು ಕಳಚಿಬೀಳಲು ಆರಂಭಿಸುತ್ತವೆ. ಸುರೇಶ್ವರಾಚಾರ್ಯರು ಒಂದು ಉದಾಹರಣೆಯ ಮೂಲಕ ಸುಂದರವಾಗಿ ವಿವರಿಸುತ್ತಾರೆ:

**ಪ್ರತ್ಯಕ್ಪ್ರಮಾತಾಂ ಬುದ್ಧೇಃ ಕರ್ಮಾಣ್ಯುತ್ಪಾದ್ಯ ಶುದ್ಧಿತಃ ।**
**ಕೃತಾರ್ಥಾನ್ಯಸ್ತಮಾಯಾಂತಿ ಪ್ರಾವೃಡಂತೇ ಘನಾ ಇವ ॥**

*(ನೈಷ್ಕರ್ಮ್ಯ ಸಿದ್ಧಿ, ೧.೯೪)*

''ಕರ್ಮಗಳು ಬುದ್ಧಿಯನ್ನು ಶುದ್ಧಿಗೊಳಿಸುವುದರ ಮೂಲಕ ಅದಕ್ಕೆ ಅಂತರ್ಮುಖತ್ವವನ್ನುಂಟುಮಾಡಿ, ಕೃತಾರ್ಥತೆಯ ಭಾವದಿಂದ ಅವು ಮಳೆಗಾಲದ ನಂತರ ಮೋಡಗಳಂತೆ, ಹೊರಟು ಹೋಗುತ್ತವೆ.'' ''ಕರ್ಮವನ್ನು ಮಾಡದೆ ನೈಷ್ಕರ್ಮ್ಯ ಸ್ಥಿತಿಯನ್ನು ಪಡೆಯಲಾಗುವುದಿಲ್ಲ'' ಎಂಬ ಶ್ರೀಕೃಷ್ಣನ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. *(ಗೀತೆ, ೩-೪)* ಆಧ್ಯಾತ್ಮಿಕ ಜೀವನದಲ್ಲಿ ಆತ್ಯಂತಿಕ ಅನುಭವನ್ನು ಪಡೆಯಬೇಕಾದರೆ - ಅದು ಭಕ್ತಿಯ ಮೂಲಕವಾಗಲಿ, ಜ್ಞಾನದ ಮೂಲಕವಾಗಲಿ - ಎಲ್ಲ

''ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು. ಇನ್ನೊಂದು ಕೈಯಿಂದ ಕೆಲಸಕಾರ್ಯಗಳನ್ನು ಮಾಡುತ್ತಿರಬೇಕು. ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೋ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು.'' **— ಶ್ರೀರಾಮಕೃಷ್ಣರು**